ಡಿ.ಡಬ್ಲು–೧

ದಿ: ೧೮.೦೩.೨೦೨೪ ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು**: ಫಿರ್ಯಾದಿ ಪರ ಶ್ರೀ ಜಿ.ಡಿ.ಹೆಚ್. ವಕೀಲರಿಂದ,

ನನಗೆ ಸೇರಿದ ೨ ಬ್ಯಾಂಕ್ ಅಕೌಂಟ್‌ಗಳು ಇರುತ್ತದೆ. ನಾನು ಫಿರ್ಯಾದಿಗೆ ನೀಡಿರುವ ಚೆಕ್ ನಂಬರ್‌ರಿನ ಸಿರಿಯಲ್ ಬುಕ್ ನಲ್ಲಿ ೫೦ ಚೆಕ್ ಹಾಳೆಗಳು ಇರುತ್ತದೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನಗೆ ಆಂಗ್ಲ ಭಾಷೆ ಬರೆಯಲು ಬರುವುದಿಲ್ಲ ಮತ್ತು ಅರ್ಥ ಆಗುವುದಿಲ್ಲ.

ಚೆಕ್ ನಂಬರ್ ೬೫೭೪೩೩ ಸದರಿ ಚೆಕ್ ೧೧.೦೧.೨೦೧೭ ರಂದು ಅಮಾನ್ಯಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಚೆಕ್ ಅನ್ನು ಎಷ್ಟು ಮೊತ್ತಕ್ಕೆ ನೀಡಿದ್ದೆ ಎಂದು ನನಗೆ ಗೊತ್ತಿಲ್ಲ. ದಿ: ೨೩.೦೧.೨೦೧೭ ರಂದು ಚೆಕ್ ನಂ.೬೫೭೪೩೫ ಸದರಿ ಚೆಕ್ ಅಮಾನ್ಯ ಗೊಂಡಿದ್ದು, ಅದಕ್ಕೆ ಬ್ಯಾಂಕಿನವರು ನನಗೆ ದಂಡ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ದಿ: ೬.೦೪.೨೦೧೭ ರಂದು ಚೆಕ್ ನಂ.೩೮೯೭೬೨೮೮ ನೇದಕ್ಕೆ ಸ್ಟಾಪ್ ಪೇಮೆಂಟ್ ಎಂದು ಅರ್ಜಿ ನೀಡಿದ್ದು, ಅದಕ್ಕೆ ಬ್ಯಾಂಕಿನವರು ರೂ.೨೦೦/– ದಂಡ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿ: ೧೨.೦೪.೨೦೧೭ ರಂದು ಚೆಕ್ ನಂ.೬೫೭೪೪೪ ನೇದನ್ನು ಮಂಜುನಾಥ ಎನ್ನುವವರಿಗೆ ನೀಡಿದ್ದೆ ಎಂದರೆ ಸರಿ.

ನಮ್ಮ ಕಾರಿನ ಚಾಲಕ ಬಿ.ಎಂ.ಸತೀಶ್ ಇವರು ೨೦೨೦ ರಂದು ಕೆಲಸ ಬಿಟ್ಟಿದ್ದಾರೆ ಎಂದರೆ ಸರಿ. ನಾನು ನನ್ನ ಕಾರಿನ ಚಾಲಕ ಬಿ.ಎಂ.ಸತೀಶ್ ರವರ ವಿರುದ್ಧ ದೂರು ನೀಡಿಲ್ಲ ಎಂದರೆ ಸರಿ. ದಿ: ೧೭.೧೦.೨೦೧೬ ರಂದು ಚೆಕ್ ನಂ.೬೫೭೪೨೧ ನೇದನ್ನು ಉಪಯೋಗಿಸಿದ್ದೇನೆ ಎಂದರೆ ಸರಿ. ದಿ: ೨೩.೧೧.೨೦೧೬ ರಂದು ಚೆಕ್ ನಂ.೬೫೭೪೨೭ ನೇದನ್ನು ಉಪಯೋಗಿಸಿದ್ದೇನೆ ಎಂದರೆ ಸರಿ. ಮಧ್ಯದಲ್ಲಿನ ಐದು ಚೆಕ್ ಗಳು ಏನಾಯ್ತು ಎಂದು ವಿವರಣೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ದಿ: ೧೨.೧೨.೨೦೧೬ ರಂದು ಚೆಕ್ ನಂ.೬೫೭೪೨೯ ನೇದನ್ನು ಉಪಯೋಗಿಸಿದ್ದೇನೆ ಎಂದರೆ ಸರಿ.

ನಾನು ಗ್ರಾಂ.ಪಂ.ಸದಸ್ಯರಾಗಿದ್ದರಿಂದ ನನ್ನ ಅಧೀಕಾರ ಚಲಾಯಿಸಿ, ಫಿರ್ಯಾದಿಯಿಂದ ಹಣ ಪಡೆದಿದ್ದರು, ಮರಳಿ ನೀಡದೆ ದಬ್ಬಾಳಿಕೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿಗೆ ಸಾಲ ಮರುಪಾವತಿ ಮಾಡುವಗೋಸ್ಕರ ಚೆಕ್ ನೀಡಿ ಅಮಾನ್ಯಗೊಳಿಸಿದ್ದೇನೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸುತ್ತಿರುವ ನಿಪಿ.೧ ಚೆಕ್ಕಿನಲ್ಲಿ ನನ್ನ ಸಹಿ ಇದೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**